**ದಿನಾಂಕ : 16.09.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀಸ ವಾಲುಃ ಪ್ರತಿವಾದಿ ಪರ ವಕೀಲರಿಂದ**

2 ನೇ ಪ್ರತಿವಾದಿ ಮನೆಯಲ್ಲಿದ್ದಾನೆ, ಏನು ಕೆಲಸ ಮಾಡುತ್ತಿಲ್ಲ, 3 ನೇ ಪ್ರತಿವಾದಿ ಓದುತ್ತಿದ್ದಾಳೆ. ನನಗೆ ಮದುವೆ 2011 ರಲ್ಲಿ ಆಯಿತು. ನಾವು ವಾಸವಾಗಿರುವ ಮನೆ ನಮ್ಮ ತಂದೆ ಹೆಸರಿನಲ್ಲಿದೆ. ಪ್ರತಿವಾದಿಯರು ಕೂಡ ಅದೇ ಮನೆಯ ಕೆಳಹಂತಸ್ತಿನಲ್ಲಿ ವಾಸವಾಗಿದ್ದಾರೆ. ನನ್ನ ಯಜಮಾನರು ಕೆಲಸಕ್ಕೆ ಹೋಗುವುದಿಲ್ಲ, ನಾನು ಕೆಲಸಕ್ಕೆ ಹೋಗುವುದಿಲ್ಲ. ನಮ್ಮ ಮನೆಯ ಖರ್ಚು ವೆಚ್ಚವನ್ನು ಯಾರ ನೋಡುತ್ತಾರೆ ಎನ್ನುವುದಕ್ಕೆ ಸಾಕ್ಷಿದಾರಳು ನಾನೇ ನೋಡುತ್ತೇನೆ ಎಂದು ಹೇಳುತ್ತಾಳೆ, ಮುಂದುವರೆದು ಮನೆಯಲ್ಲಿ ಟ್ಯೂಷನ್ ಮಾಡುತ್ತೇನೆ ಎಂದು ಹೇಳುತ್ತಾಳೆ. ನಾನು ಮದುವೆಯಾದಾಗಿನಿಂದ ಈ ವರೆಗೂ ಈಗಿರುವ ಮನೆಯಲ್ಲೇ ವಾಸವಾಗಿದ್ದೇನೆ. ಈಗ 1 ವರ್ಷಗಳಿಂದ ನನ್ನ ,ಯಜಮಾನರು ಕೆಲಸಕ್ಕೆ ಹೋಗುತ್ತಿಲ್ಲ, ಆದರೆ ಹಿಂದೆ ಇನ್ಸುರೆನ್ಸ ಕಂಪನಿಯಲ್ಲಿ ಬ್ರೋಕರ್ ಆಗಿದ್ದರು. ಅವರು ಪಾಲಿಸಿ ಮಾಡಿದ ನಂತರ ಆ ಪಾಲಿಸಿ ಇರುವವರೆಗೆ ಅವರಿಗೆ ಬ್ರೋಕರ್ಯೆಸ್ ಹಣ ಬರುತ್ತದೆ ಎಂದರೆ

ಗೊತ್ತಿಲ್ಲ. ಮನೆಯಲ್ಲಿ ಟ್ಯೂಷನ್ ಗೆ 2 ಮಕ್ಕಳು ಬರುತ್ತಿದ್ದಾರೆ. ಅದರಿಂದ ತಿಂಗಳಿಗೆ ನಾಲ್ಕೂವರೆ ಸಾವಿರ ಬರುತ್ತದೆ. ನನಗೆ ಒಬ್ಬ ಹೆಣ್ಣುಮಗಳು ಇದ್ದಾಳೆ. ಅವಳು ಬಿಷ್ಯಪ್ ಕಾಟನ್ ಶಾಲೆಯಲ್ಲಿ ಓದುತ್ತಿದ್ದಾಳೆ. ಮಗುವಿನ ವರ್ಷದ ಫೀಸ್ ಎಷ್ಟು ಎನ್ನುವುದಕ್ಕೆ ಸಾಕ್ಷಿದಾರಳು ಅದು ನಮ್ಮ ಯಜಮಾನರಿರಿಗೆ ಗೊತ್ತು. ಮಗಳು 1 ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಬಿಷ್ಯಪ್ ಕಾಟನ್ ಶಾಲೆಯಲ್ಲಿ ಮಕ್ಕಳಿಗೆ ಅಡ್ಮಿಷನ್ ಸಿಗುವುದು ತುಂಬಾ ಕಷ್ಟ ಎನ್ನುವುದು ಸರಿ . ಅಲ್ಲಿ ಸೀಟ್ ಸಿಗಬೇಕಾದರೆ ಡೊನೇಷನ್ ಕೊಡಬೇಕಾಗುತ್ತದೆ ಎಂದರೆ ಸಾಕ್ಷಿದಾರಳು ಹಾಗೇನು ಇಲ್ಲ ಎಂದು ಹೇಳುತ್ತಾಳೆ. ಈ ವರ್ಷದ ಫೀಸ್ ಇನ್ನು ಕಟ್ಟಿಲ್ಲ. ನನ್ನ ಮಗಳ ಫೀಸ್ ಕಟ್ಟಲು ನಮ್ಮ ತಾಯಿಯವರು ಸಹಾಯ ಮಾಡಿಲ್ಲ. ನನ್ನ ತಾಯಿಯ ಹೆಸರಿನಲ್ಲಿ ಒಂದು ಬಾರ್ ಅಂಡ್ ರೆಸ್ಟೋರೆಂಟ್ ಇದೆ, ಅದರಿಂದ ಆದಾಯ ಬರುತ್ತದೆ ಎಂದರೆ ಸರಿ . ನನ್ನ ತಾಯಿಯ ಹೆಸರಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಲೈಸೆನ್ಸ ಸುಮಾರು 10 ವರ್ಷಗಳಿಂದ ಇರುತ್ತದೆ. ಅದರ ವಹಿವಾಟು ನನ ತಾಯಿಯವರು ನೋಡಿಕೊಳ್ಳುತ್ತಾರೆ ಎಂದರೆ ಸರಿ . ಆ ಲೈಸೆನ್ಸ್ ಇರುವುದು ಸ್ವಂತ ಬಿಲ್ಡಿಂಗ್ ನಲ್ಲಿ ಎಂದರೆ ಸರಿ . ಆ ಬಿಲ್ಡಿಂಗ್ ನನ್ನ ತಾಯಿಯ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಆ ಬಿಲ್ಡಂಗ್ನಲ್ಲಿ ನನ್ನ

ತಾಯಿಯು ಸ್ವಂತ ವ್ಯವಹಾರ ಮಾಡುತ್ತಾರೋ, ಅಥವಾ ಬಾಡಿಗೆ ಕಟ್ಟುತ್ತಾರೋ ಎಂದರೆ ಸಾಕ್ಷಿದಾರಳು ಅದು ನಮ್ಮ ತಾಯಿಯ ಸ್ವಂತ ಬಿಲ್ಡಿಂಗ್ ಎಂದು ಹೇಳುತ್ತಾಳೆ.

ನನ್ನ ತಂದೆಗೆ ಎಷ್ಟು ಜನ ಅಣ್ಣ-ತಮ್ಮಂದಿರು ಅಕ್ಕ-ತಂಗಿಯರು ಇದ್ದಾರೆ ಎಂದರೆ ಸಾಕ್ಷಿದಾರಳು ಒಟ್ಟು 6 ಜನ ಇದ್ದಾರೆ. ಅದರಲ್ಲ 3 ಜನ ಗಂಡು ಮಕ್ಕಳು 3 ಜನ ಹೆಣ್ಣುಮಕ್ಕಳು. ನಮ್ಮ ತಂದೆಯ ಅಣ್ಣ-ತಮ್ಮಂದಿರ ನಡುವೆ ವಿಭಾಗ ಆಗಿದೆ. ವಿಭಾಗ ಆಗಿದೆ ಎಂದು ತೋರಿಸಲು ನ್ಯಾಯಾಲಯದಲ್ಲಿ ದಾಖಲಾತಿ ಕೊಟ್ಟಿಲ್ಲ. ಅವರನ್ನು ಈ ದಾವಾದಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ . ನನ್ನ ತಂದೆ ಮತ್ತು ಅವರ ಸಹೋದರರು ಎಷ್ಟು ವರ್ಷದಿಂದ ಬೇರೆ ಬೇರೆಯಾಗಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆಯವರ ಜೀವಿತ ಕಾಲದಲ್ಲಿ ಮತ್ತು ಈಗಲೂ ಕೂಡ ಅವರು ಯಾವುದೇ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸಾಕ್ಷಿದಾರಳು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾಳೆ. ನನ್ನ ತಾಯಿಯವರಿಗೆ ಬಾರ್ ಅಂಡ್ ರೆಸ್ಟೋರೆಂಟ್ ನಿಂದ ಆದಾಯ ಬರುತ್ತಿರುವುದರಿಂದ ಅವರು ಮತ್ತು ನಮ್ಮ ತಂದೆ ಸೇರಿ ಕೆಲವೊಂದು ಆಸ್ತಿ ಖರೀದಿ ಮಾಡಿದರು ಎಂದರೆ ಸಾಕ್ಷಿದಾರಳು ನಮ್ಮ ತಂದೆ ಒಬ್ಬರೇ ಖರೀದಿ ಮಾಡಿದರು ಎಂದು ಹೇಳುತ್ತಾಳೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಅವಕಾಶ ಕೇಳಿದ್ದು ಅವಕಾಶ ನೀಡಿ ಪಾಟೀಸವಾಲನ್ನು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,**

**(ಸಾಬಪ್ಪ)**
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು,